# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 04/2024**

**ದೋ.ಸಾ. :24 ಪ್ರಾ.ಸಾ. : 12**

| | | |
|---|---|---|
| ಸಾಕ್ಷಿಯ ಹೆಸರು | : | ರಾಘವೇಂದ್ರ ಹೊಸಬಣ್ಣ ನಾಯ್ಕ |
| ತಂದೆಯ ಹೆಸರು | : | ಹೊಸಬಣ್ಣ ನಾಯ್ಕ |
| ವಯಸ್ಸು | : | 45 ವರ್ಷ |
| ಕೆಲಸ | : | ಸಿ.ಹೆಚ್.ಸಿ.-445, ಮುರ್ಡೇಶ್ವರ ಪೊಲೀಸ್ ಠಾಣೆ |
| ವಾಸ | : | ಮುರ್ಡೇಶ್ವರ |

**ದಿನಾಂಕಃ 13-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ಕಳೆದ ಎರಡೂವರೆ ವರ್ಷಗಳಿಂದ ಮುರ್ಡೇಶ್ವರ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆಯಾಗಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ.17-10-2023 ರಂದು ನಾನು ಮುರ್ಡೇಶ್ವರ ಬೀಚ್ ನಲ್ಲಿ ಪ್ಯಾಟ್ರೋಲಿಂಗ್ ಕರ್ತವ್ಯದಲ್ಲಿದ್ದಾಗ, ರಾತ್ರಿ ಸುಮಾರು 7.30 ರಿಂದ 8.00 ಗಂಟೆಯ ಸಮಯದಲ್ಲಿ ತನಿಖಾಧಿಕಾರಿಯಾದ ಚಾಸಾ-34 ರವರು ನನಗೆ ಕರೆ ಮಾಡಿ, ಈ ಪ್ರಕಣದ ಘಟನಾ ಸ್ಥಳವಾದ ಕಟಗೇರಿಯ ತೆರ್ನಮಕ್ಕಿಯಲ್ಲಿರುವ ಚಾಸಾ-1 ರವರ ಮನೆಯ ಬಳಿ ಬಂದು ಘಟನಾ ಸ್ಥಳವನ್ನು ಕಾಯ್ದು ಸಂರಕ್ಷಿಸಬೇಕೆಂದು ತಿಳಿಸಿದ ಮೇರೆಗೆ, ಆ ಕೂಡಲೇ ನಾನು ಚಾಸಾ-1 ರವರ ಮನೆಯ ಬಳಿ ಹೋಗಿ, ಘಟನಾ ಸ್ಥಳದ ಸಂರಕ್ಷಣೆಗಾಗಿ ಬ್ಯಾರಿಕೇಡ್ ಗಳ ಮೂಲಕ ಸಂರಕ್ಷಣೆ ಮಾಡಿರುತ್ತೇನೆ.

2. ಆನಂತರ ತನಿಖಾಧಿಕಾರಿಯವರು ಸದರಿ ಘಟನಾ ಸ್ಥಳದಲ್ಲಿ ಶವ ಪಂಚನಾಮೆಯನ್ನು ಮಾಡಿ, ಶವವನ್ನು ಭಟ್ಕಳದ ತಾಲೂಕ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ. ನಂತರ ಮರುದಿನ ಬೆಳಿಗ್ಗೆ ತನಿಖಾಧಿಕಾರಿಯವರು ಪಂಚರೊಂದಿಗೆ ಸ್ಥಳಕ್ಕೆ ಬಂದು ಪಂಚನಾಮೆಯನ್ನು ಮಾಡಿರುತ್ತಾರೆ. ಆ ಸಮಯದಲ್ಲಿ ತನಿಖಾಧಿಕಾರಿಗೆ ತನಿಖೆಗೆ ಅವಶ್ಯವಿರುವ ಸಹಾಯವನ್ನು ಮಾಡಿರುತ್ತೇನೆ ಹಾಗೂ ಈ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ. ನಿಪಿ-2 ಫೋಟೊದಲ್ಲಿ

ಕಾಣುತ್ತಿರುವ ಘಟನಾ ಸ್ಥಳವು ನಾನು ಸಂರಕ್ಷಣೆ ಮಾಡಿದ ಸ್ಥಳವಾಗಿರುತ್ತದೆ. ಸದರಿ ಫೋಟೊದಲ್ಲಿ ಕಾಣುತ್ತಿರುವ ಕೊಲೆಯಾದ ನಂದಿನಿಯ ಶವವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಎಸ್.ಜಿ.ಎನ್. ವಕೀಲರಿಂದಃ–**

3. ಕೃತ್ಯದ ನಡೆದ ದಿನ ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಮತ್ತು ನಾನು ಯಾವುದೇ ಘಟನಾ ಸ್ಥಳದ ಸಂರಕ್ಷಣೆ ಮಾಡಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಯವರು ಘಟನಾ ಸ್ಥಳದಲ್ಲಿ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಯ ಹೇಳಿಕೆಯ ಮೇರೆಗೆ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ – ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ